# 4

# ಏಲಿ

## ಸೈತಾನನ ಮಕ್ಕಳನ್ನು ಪಡೆದ ದೇವರ ಮನುಷ್ಯ (2:12-4:22)

ಇಸ್ರಾಯೇಲಿನಲ್ಲಿ ಭಯಂಕರವಾದ ಅಪಮಾನ ತರುವಂಥ ಕಾರ್ಯ ನಡೆದದ್ದು 2:12-4:22ರಲ್ಲಿ ಪ್ರಕಟವಾಗಿದೆ. ರಾಷ್ಟ್ರದಲ್ಲಿ ನಾಯಕತ್ವ ಇರಲಿಲ್ಲ; ಎಲ್ಲ ಕ್ಷೇತ್ರಗ ಳಲ್ಲಿ ಮಾರ್ಗದರ್ಶನದ ಕೊರತೆ ಇತ್ತು; ಮತ್ತು ಪ್ರತಿಯೊಬ್ಬನು ತನ್ನದೇ ನ್ಯಾಯವನ್ನು ಹೊಂದಿದ್ದನು. ಯಾಜಕರು ನಾಯಕತ್ವವನ್ನು ಕೊಡಬೇಕಾಗಿತ್ತು, ಆದರೆ ಈ ಭಾಗದಲ್ಲಿ ನೋಡುವಂತೆ ಅವರೂ ಕೂಡ ಅವನತಿ ಹೊಂದಿದ್ದರು. ಹನ್ನಳು ಚಿಕ್ಕ ಬಾಲಕ ಸಮುವೇಲನನ್ನು ಅರ್ಪಿಸುವ ಸುಂದರವಾದ ಕತೆಯ ಮಧ್ಯದಲ್ಲಿ: "ಏಲಿಯ ಮಕ್ಕಳು ದುಷ್ಟರಾಗಿದ್ದರು. ಅವರು ಯೆಹೋವನನ್ನು ಲಕ್ಷಿಸುತ್ತಿರಲಿಲ್ಲ" (2:12). ಎಂಬ ವೇದನೆಯನ್ನು ವ್ಯಕ್ತಪಡಿಸುವ ವಚನ ಓದುತ್ತೇವೆ. ಪರಿಣಾಮವಾಗಿ ಎಲ್ಲವೂ ಸರಿಯಿರಲಿಲ್ಲ. ಈ ಸಮಸ್ಯೆಗಳ ಕೇಂದ್ರ, ಏಲಿ ಮತ್ತು ಅವನ ಇಬ್ಬರು ಗಂಡುಮಕ್ಕಳ ಮೇಲಿತ್ತು.

ಶೀಲೋವಿನಲ್ಲಿ ಏಲಿಯ ಮಹಾಯಾಜಕನಾಗಿದ್ದನು. ಅವನು ಇತಾಮಾರ ವಂಶದವನು, ಆರೋನನ ಮಕ್ಕಳಲ್ಲಿ ಚಿಕ್ಕವನು. ಐವತ್ತೆಂಟನೇಯ ವರ್ಷದಲ್ಲಿ ಅವನು ಇಸ್ರಾಯೇಲಿನ ನ್ಯಾಯಸ್ಥಾಪಕನಾದನು ಮತ್ತು ನಾಲ್ವತ್ತು ವರ್ಷ ನ್ಯಾಯ ಪಾಲಿಸಿದನು (4:18). ಅವನ ವಿಷಯದಲ್ಲಿ ಮೊದಲು ನಮೂದಿಸಲ್ಪಟ್ಟಾಗ ಅವನು ಸುಮಾರು ಎಪ್ಪತ್ತು ವರ್ಷ ಸಮೀಪಿಸಿರಬಹುದು. ಮುದಿಪ್ರಾಯದಲ್ಲಿ ಅವನಿಗಿಬ್ಬರು ಪುತ್ರರಿದ್ದರು. ಅಂಥ ಮಕ್ಕಳ ವಿಷಯದಲ್ಲಿ ಸಾಮಾನ್ಯವಾಗಿ ಆಗುವಂತೆ ಅವರು ಬಹು ಸ್ವೇಚ್ಛೆಯಾಗಿ ಬೆಳೆದರು. ಅವನು ಹನ್ನಳನ್ನು ಕಠಿಣವಾಗಿ ಗದರಿಸುವದಕ್ಕೆ ತ್ವರೆಪಟ್ಟನು ಆದರೆ ತನ್ನ ಮಕ್ಕಳನ್ನು ತಿದ್ದುವದರಲ್ಲಿ ನಿಧಾನವಾಗಿಯೂ ಮತ್ತು ಮೃದುವಾಗಿಯೂ ಇದ್ದನು.

ದೇವರಿಗೆ ಅಧೀನನಾಗುವ ಭಕ್ತಿಯ ಮನುಷ್ಯನೆಂದು ಏಲಿಯು ಗೌರವಿಸಲ್ಪಟ್ಟದ್ದು ತೋರಿಬರುತ್ತದೆ. ಅವನು ದೇವ ಮಂಜೂಷವನ್ನು ಬಹಳವಾಗಿ ಗೌರವಿಸುತ್ತಿದ್ದನು. ತನ್ನ ಮಕ್ಕಳನ್ನು ಅಲಕ್ಷಿಸಿದ್ದು ಅವನ ಜೀವನದಲ್ಲಿನ ಒಂದೇ ತಪ್ಪಾಗಿತ್ತು.

ದುಷ್ಟ ಮಕ್ಕಳಿಂದಾಗಿ ದೈವಭಕ್ತ ಪಿತೃಗಳಿಗೆ ಆಗುವ ಮಹಾ ವೇದನೆಯ ಚಿತ್ರ ಈ ಘಟನೆಯಲ್ಲಿ ಮೂಡಿಬಂದಿದೆ. ಒಂದು ಮಗುವಿನ ಧರ್ಮಭ್ರಷ್ಟ ಕಾರ್ಯದಿಂದಾಗಿ ಅನೇಕ ದೈವಭಕ್ತ ಪಿತೃಗಳು ಸಾಯುವವರೆಗೂ ತಲೆತಗ್ಗಿಸುವಂತಾಗಿದೆ. ಇದು ಏಲಿಯ ವಿಷಯದಲ್ಲೂ ನಿಜವಾಗಿತ್ತು.

### ಬಹು ಅವಶ್ಯವಿದ್ದ ಮೇರೆ

ಏಲಿಯ ಪಾಲನೆಪೋಷಣೆಯಲ್ಲಿ ಕೊರತೆಯಿತ್ತು! ಏಲಿಯು ಒಬ್ಬ ಎಲ್ಲದಕ್ಕು ಅನುಮತಿಕೊಡುವ ತಂದೆಯಾಗಿದ್ದನು ಎಂದು ಯಾವ ಸಂಶಯವಿಲ್ಲ. ಅವನ ಮಕ್ಕಳ ಪಾಪದ ಕುರಿತು ಸುದ್ದಿ ತಿಳಿದು ಬಂದಾಗ ಆ ಸುದ್ದಿಯನ್ನು ಅಲಕ್ಷಿಸಿದನು. ಅವರನ್ನು ಗದರಿಸಿದನು

ಆದರೆ ಕಠಿಣವಾಗಿ ಅಲ್ಲ. ಒಬ್ಬ ನ್ಯಾಯಸ್ಥಾಪಕನಾಗಿ ಮತ್ತು ಮಹಾಯಾಜಕನಾಗಿ ಅವನ ಕರ್ತವ್ಯವು ಬಹಳ ಸ್ಪಷ್ಟವಾಗಿತ್ತು. ಅವರನ್ನು ಕೆಲಸದಿಂದ ತೆಗೆದು ಹಾಕಿ ಕೊಲ್ಲಲ್ಪಡಬೇಕಿತ್ತು (ಯಾಜಕಕಾಂಡ 18:6, 20, 29; 20:10; 21:6, 7, 17, 23). ತನ್ನ ಮಕ್ಕಳ ಪಾಪಗಳು ಮುಚ್ಚಿಕೊಳ್ಳಲೂ ಸಾಧ್ಯವಾ ಗದ ಸ್ಥಿತಿಯಲ್ಲಿದ್ದವು ಎಂದು ಏಲಿಗೆ ತಿಳಿದಿತ್ತು (2:22), ಆದಾಗ್ಯೂ ಅವನು ಕೇವಲ ಗದರಿಕೆಯಿಂದ ತೃಪ್ತಿಪಟ್ಟನು. ನ್ಯಾಯ ಕೊಡುವ ತನ್ನ ಅಧಿಕಾರದಿಂದ ಹಿಂಜರಿದನು. ಜನರಿಗೆ ಅವರು ಮಾಡುತ್ತಿದ್ದ ಅನ್ಯಾಯದ ಕುರಿತು ಅವನು ಮೌನವಾಗಿದ್ದನು ಮತ್ತು ದೇವರ ವಿಷಯದಲ್ಲಿ ಅವನು ಬಹು ಮೃದು ಧೋರಣೆಯುಳ್ಳವನಾಗಿದ್ದನು ಎಂದು ಒಬ್ಬರು ಗಮನಿಸಿದ್ದಾರೆ!

ಕೆಲವು ಮಕ್ಕಳು ಕಟ್ಟುನಿಟ್ಟಿನ ಶಿಸ್ತಿನಿಂದಾಗಿ ಕೆಟ್ಟುಹೋಗುತ್ತಾರೆ (ಕೊಲೊಸ್ಸೆ 3:21), ಆದರೆ ಇನ್ನೂ ಕೆಲವರು ಅಲ್ಪ ಶಿಸ್ತಿನಿಂದಾಗಿ ಕೆಟ್ಟುಹೋಗುತ್ತಾರೆ. ಧಾರಾಳವಾಗಿ ಒಪ್ಪಿಕೊಳ್ಳುವ ವಿಷಯದಲ್ಲಿ ಎರಡು ಭಾಗಗಳಲ್ಲಿ ಪಿತೃಗಳು ಎಚ್ಚರವಹಿಸಬೇಕು. ಒಂದು, ಶಿಸ್ತಿನ ಕುರಿತು ಕಟ್ಟುಪಾಡು ವಿಧಿಸದೇ ಇರುವದು (3:13; 2:25). "ಗದರಿಸಿದನು" ಎಂಬ ಪದವು ದುರ್ಬಲಗೊಳಿಸುವ, ತಗ್ಗಿಸಿಬಿಡುವ ಅಥವಾ ನಿಶ್ಯಕ್ತಗೊಳಿಸುವದನ್ನು ಸೂಚಿಸುತ್ತದೆ. ಏಲಿಯು ತನ್ನ ಪುತ್ರರನ್ನು ಕಠಿಣವಾದ ಕ್ರಮ ತೆಗೆದುಕೊಂಡು ಶಿಸ್ತಿಗೊಳಪಡಿಸಬೇಕಿತ್ತು. ಆದರೆ ಅವನು ಹಾಗೆ ಮಾಡಲಿಲ್ಲ. ಎರಡನೇಯದು, ಪಾಲಕರ ಮಾರ್ಗದರ್ಶನದ ಕುರಿತು ಕಟ್ಟುಪಾಡು ವಿಧಿಸದೇ ಇರುವದು (2:12, 17). ಪಾಲಕರ ಮಾರ್ಗದರ್ಶನವಿಲ್ಲದೇ ಮಕ್ಕಳು ತಾವೇತಾವಾಗಿ ಅನೇಕ ವಿಷಯಗಳಲ್ಲಿ ನಿರ್ಧಾರ ತೆಗೆದುಕೊಳ್ಳುವಾಗ, ಜವಾಬ್ದಾರಿಯಿಲ್ಲದೇ ಬೆಳೆಯುತ್ತಾರೆ. ಕೆಲವೊಮ್ಮೆ "ತಾವೆಲ್ಲಿ ತಪ್ಪಿದೆವು?" ಎಂಬ ಪಿತೃಗಳು ಪ್ರಶ್ನೆಗೆ ಉತ್ತರ ದೊರೆಯುವದಿಲ್ಲ. ಆದರೆ ಏಲಿಯ ವಿಷಯದಲ್ಲಿ ಉತ್ತರಿಸಬಹುದು. ಕಟ್ಟುಪಾಡಿಲ್ಲದ ಜೀವನವು ಅವನ ಮಕ್ಕಳ (4:11), ಅವನ (4:18) ಮತ್ತು ಇತರರ (4:22) ನಾಶನಕ್ಕೆ ಕಾರಣವಾಯಿತು.

*ಕಟ್ಟುಪಾಡಿಲ್ಲದ ಪಾಲನ ಪೋಷಣೆಯು ಚಕಿತಗೊಳಿಸುವ ವಿಭಿನ್ನತೆಯ ಪರಿಣಾಮಬೀರುತ್ತದೆ.* ಏಲಿಯ ಕುಟುಂಬವನ್ನು ಗಮನಿಸಿ. ಆಲಯದ ವಿಷಯದಲ್ಲಿ ಅವರ ವರ್ತನೆಯಲ್ಲಿ ನಂಬಲು ಅಸಾಧ್ಯವಾದ ವಿಭಿನ್ನತೆ ಇತ್ತು (1:14; 2:13, 14). ಯಜ್ಞದ ಕೆಲವು ಭಾಗಗಳನ್ನು ದೇವರು ಯಾಜಕರಿಗೆ ಒದಗಿಸಿದ್ದನು (ಧರ್ಮೋಪದೇಶ ಕಾಂಡ 12:18). ಏಲಿಯ ಮಕ್ಕಳು ದುರಾಶೆಯುಳ್ಳವರಾಗಿದ್ದರು ಮತ್ತು ಅತಿಆಸೆ ಇತ್ತು. ಆರಾಧನೆಗೆ ಬರುವವರಿಗೆ ನ್ಯಾಯವಾಗಿ ದೊರಕಬೇಕಾಗಿದ್ದ ಮಾಂಸವನ್ನು ಅವರು ತೆಗೆದುಕೊಳ್ಳುತ್ತಿದ್ದರು (ಯಾಜಕಕಾಂಡ 8:31; 2 ಪೂರ್ವಕಾಲವೃತ್ತಾಂತ 35:13). ಜನರನ್ನು ದೋಚುವುದು ಸಾಕಾಗದೇ ಅವರು ದೇವರನ್ನು ದೋಚತೊಡಗಿದರು. ಕೊಬ್ಬನ್ನು ಯಜ್ಞ ವೇದಿಯ ಮೇಲೆ ಇಟ್ಟು ದೇವರಿಗೆ ಹೋಮಮಾಡಬೇಕಿತ್ತು (ಯಾಜಕಕಾಂಡ 3:5-17; 7:31, 34), ಆದರೆ ಈ ಮಕ್ಕಳು ಕೊಬ್ಬನ್ನು ಹೋಮ ಮಾಡಲು ನಿರಾಕರಿಸಿದರು (2:17). ಈ ಕಾರ್ಯಗಳು ದೇವನಿಂದನೀಯವಾಗಿತ್ತು. ಆದರೆ ಅವರು ಅದನ್ನು ನಿಲ್ಲಿಸಲಿಲ್ಲ. ಅವರ ಕಾಮತೃಷೆ, ಗುಡಾರದ ಸ್ತ್ರೀಯರೊಂದಿಗೆ ಅನೈತಿಕ ಸಂಬಂಧ ಬೆಳೆಸುವದಕ್ಕೆ ನಡೆಸಿತು (2:22). ಏಲಿಯು ವಿಭಿನ್ನ ವ್ಯಕ್ತಿಯಾಗಿದ್ದನು! ಅವನು ಶ್ರದ್ಧಾಭಕ್ತಿಯ ಚಿತ್ರವಾಗಿದ್ದನು.

ಮಂಜೂಷದ ಕುರಿತು ಅವರ ಅಭಿಪ್ರಾಯಗಳು ವಿಭಿನ್ನವಾಗಿದ್ದವು (4:3, 4; 4:13, 18ಎ). ಏಲಿಯ ಮಕ್ಕಳು ಮಂಜೂಷವನ್ನು ಮೂಢನಂಬಿಕೆಯಿಂದ ಪರಿಗಣಿಸುತ್ತಿದ್ದರು. ಧರ್ಮವು ಕೇವಲ ಹೊರಗಿನ ಆಚರಣೆಯಾಗಿತ್ತು. ಮಂಜೂಷವು ರಹಸ್ಯವಾಗಿಯೂ ಮತ್ತು ಚಮತ್ಕಾರದ್ದಾಗಿಯೂ ಇತ್ತು. ಏಲಿಯ ದೃಷ್ಟಿಯಲ್ಲಿ ಮಂಜೂಷವು ಪರಿಶುದ್ಧವಾದ ಗೌರವಪಡೆದಿತ್ತು. ಅದನ್ನು ಯುದ್ಧ ಭೂಮಿಗೆ ಕಳುಹಿಸುವದು ಅವನಿಗೆ ಎಷ್ಟು ಮಾತ್ರಕ್ಕೂ ಮನಸ್ಸಿರಲಿಲ್ಲ. ಆದರೆ ಅವನು ಯಶಸ್ವಿಯಾದ ವಿರೋಧಕ್ಕೆ ಅನೇಕಾವರ್ತಿ ಮಣಿದಿದ್ದನು.

ಮಂಜೂಷದ ಕುರಿತು ಪ್ರತಿಯೊಬ್ಬನ ಅಭಿಪ್ರಾಯವು, ಯೆಹೋವನ ವಿಷಯದಲ್ಲಿನ ಅವನವನ ತಿಳುವಳಿಕೆಯನ್ನು ಪ್ರತಿಬಿಂಬಿಸಿತು.

ತಮ್ಮ ಸಹಚರರೊಂದಿಗೆ ವರ್ತಿಸುವ ರೀತಿಯಲ್ಲಿಯೂ ವಿಭಿನ್ನತೆಯಿತು. ಅವನ ಪುತ್ರರು ಸ್ವಾರ್ಥತೆಯಿಂದ ನಿಯಂತ್ರಿಸಲ್ಪಟ್ಟಿದ್ದರು. ಇತರರನ್ನು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸುವಾಗ ಆ ಮಕ್ಕಳ ಪಾಷಾಂಡ ಭಾಷೆ, ದುರಾಸೆ ಮತ್ತು ಅಪವಿತ್ರತೆ ಎದ್ದು ಕಾಣುತ್ತಿತ್ತು. ಇತರರೆಡೆಗೆ ಕರುಣಾಮಯಿಯಾಗಿರುವದು ಏಲಿಯ ಗುರುತಾಗಿತ್ತು (1:7). ಇತರರ ಜೀವನದಲ್ಲಿ ಒಳ್ಳೇದನ್ನು ಬಯಸುತ್ತಿದ್ದನು (2:20). ದೇವರನ್ನು ಅರಿತುಕೊಳ್ಳುವದರಲ್ಲಿಯು ಇಬ್ಬರಲ್ಲಿ ವಿಭಿನ್ನತೆಯಿತ್ತು. ಏಲಿಯ ಮಕ್ಕಳಲ್ಲಿ ಆತ್ಮಿಕ ಜೀವನವಿರಲಿಲ್ಲ. ಅವರು ನಿಜವಾಗಿಯೂ ನಾಸ್ತಿಕರಾಗಿದ್ದರು (2:12). ದೇವರೊಂದಿಗೆ ಅವರು ಅನ್ಯೋನ್ಯವಾಗಿರಲಿಲ್ಲ, ಅವನೊಂದಿಗೆ ಕರುಣೆಯಿರಲಿಲ್ಲ ಮತ್ತು ಅವನಿಗೆ ಜವಾಬ್ದಾರರಾಗಿರಲಿಲ್ಲ (2:12). ಏಲಿಯು ವಿಭಿನ್ನನಾಗಿದ್ದನು! (3:18; 4:13).

ತನ್ನ ಮಕ್ಕಳನ್ನು ತರಬೇತುಗೊಳಿಸುವದರಲ್ಲಿ ಮತ್ತು ಅಧಿಕಾರಕ್ಕೆ ಗೌರವದ ಭಾವನೆ ಹುಟ್ಟಿಸುವದರಲ್ಲಿ ಏಲಿಯು ವಿಫಲನಾಗಿದ್ದದ್ದೇ, ಈ ವಿಭಿನ್ನತೆಯ ಸರಮಾಲೆ ಉಂಟಾಗುವದಕ್ಕೆ ಕಾರಣವಾಯಿತು.

ಕಟ್ಟುಪಾಡಿಲ್ಲದೇ ಇರುವದರಿಂದ ಭಯಾನಕ ಪರಿಣಾಮಗಳುಂಟಾಗುತ್ತವೆ. ಮೊದಲಿಗೆ, ಆ ಕುಟುಂಬದ ಪ್ರಭಾವ ನಾಶವಾಗಿತು (2:22-24). ಪಾಪವು ಪಾಪಿಯಲ್ಲಿ ಕೊನೆಗಾಣುವದಿಲ್ಲ. ಪ್ರತಿಯೊಬ್ಬ ಮಾನವನು ಇನ್ನೊಬ್ಬನಿಗೆ ಸಂಬಂಧಪಡುತ್ತಾನೆ. ಎಲ್ಲರು ಎಲ್ಲರನ್ನು ಮುಟ್ಟುತ್ತಾರೆ. ಏಲಿಯ ಪ್ರತಿಷ್ಠೆ ನಿರಂತರಕ್ಕೂ ಹೊರಟುಹೋಯಿತು! ಕುಟುಂಬದಲ್ಲಿ ವಾಜ್ಯಗಳು ಹೆಚ್ಚಾದವು (2:25). ತನ್ನ ಮಕ್ಕಳ ಅಪಾಯಕಾರಿ ಮಾರ್ಗವನ್ನು ಗಮನಿಸಿದ ಏಲಿ. ಅವರ ಕಾರ್ಯಗಳನ್ನು ಬದಲಾಯಿಸಲು ಪ್ರಯತ್ನಿಸಿದನು. ಆದರೆ ಅವನು ಬಹಳ ತಡಮಾಡಿದನು. ಅವರು ಆಗಲೇ ಕೆಟ್ಟತನದಲ್ಲಿ ಬೇರು ಬಿಟ್ಟಿದ್ದರು ಮತ್ತು ಬದಲಾವಣೆಯನ್ನು ನಿರಾಕರಿಸಿದರು. ಪ್ರತಿಭಟನೆಯು ಅಲ್ಲಿ ಕಂಡುಬಂದಿತು. ಕುಟುಂಬದಲ್ಲಿನ ದೈವ ಭಕ್ತಿಯಲ್ಲಿ ಹೊಂದಾಣಿಕೆ ತೋರಿತು (2:29). 2:29ರ ಮಾತುಗಳು ಏಲಿಗೆ ಹೇಳಲ್ಪಟ್ಟದ್ದು ಆಶ್ಚರ್ಯಕರವಾಗಿ ತೋರುತ್ತದೆ. ಏಲಿಯು ಯಜ್ಞಗಳನ್ನು "ಒದ್ದು ಬಿಟ್ಟನು" ಎಂದು ದೇವರು ಆಪಾದಿಸಿದನು. "ಒದ್ದು ಬಿಡುವದು" ಎಂಬ ಪದವನ್ನು ಮುದ್ದಿಸಿದ ಒಂದು ಪಶುವು ತನ್ನ ನೊಗವನ್ನು ಭಯಂಕರವಾಗಿ ಕಿತ್ತೆಸೆಯುವದಕ್ಕೆ ಹೋಲಿಸಲಾಗಿದೆ. ದೇವರ ಆಜ್ಞೆಗಳಿಗೆ ಒಳಗಾಗುವುದು ಏಲಿಗೆ ಇಷ್ಟವಿರಲಿಲ್ಲವೆಂದು ಆಪಾದನೆಯಿತ್ತು! ಏಲಿಯು ತನ್ನ ಮಕ್ಕಳೊಂದಿಗೆ ಸಂಬಂಧವಿಟ್ಟನೇ ಹೊರತು ದೇವರೊಂದಿಗಲ್ಲ. ಯೆಹೋವನಿಗಿಂತಲೂ ಏಲಿಯೂ ತನ್ನ ಪುತ್ರರನ್ನು ಗೌರವಿಸುತ್ತಿದ್ದನೆಂದು ಆಪಾದನೆಯಿತ್ತು. ಈ ರೀತಿಯಾದ ಪರಿಣಾಮವು ಸಹಜವಾಗಿತ್ತು. ತನ್ನ ತಪ್ಪಿಗೆ ನೈತಿಕ ಹೊಣೆ ಹೊರುವದಕ್ಕಿಂತ, ದೇವರನ್ನೋ, ಸಭೆಯನ್ನೋ ಅಥವಾ ಬೋಧಕನನ್ನೋ ಒಬ್ಬ ಪಾಲಕ ದೂಷಿಸುವದು ಸರಳವಾಗಿದೆ.

ಎರಡನೇಯದಾಗಿ, ಆ ಕುಟಂಬವು ವಂಶಪಾರಂಪರಿಕವಾಗಿ ದುಃಖವನ್ನು ಅನುಭವಿಸಿತು (2:33; 4:13-17). ಏಲಿ ಮತ್ತು ಅವನ ಪುತ್ರರು ಅಯೋಗ್ಯರಾಗಿ ಕಂಡುಬಂದರು ಮತ್ತು ಯಾಜಕತ್ವವನ್ನು ಕಳಕೊಂಡರು. ಅವರ ಹೆಸರುಗಳು ಯಾವ ವಂಶಾವಳಿಯಲ್ಲೂ ಕಾಣುವದಿಲ್ಲ. ಮಂಜೂಷವು ಕಳೆದು ಹೋದದ್ದು ಮತ್ತು ಶೀಲೋವಿನಲ್ಲಿ ಗುಡಾರವು ಸೋತುಹೋದದ್ದರ ಜೊತೆಗೆ ಅವರು ಯಾವ ಕಾಲಕ್ಕೂ ಹೆಸರಿಸಲ್ಪಡುತ್ತಾರೆ. ಕುಟುಂಬದ ಪಾಪದ ನಿಮಿತ್ತ ದೇವರು ಆ ಕುಟುಂಬದ ಬಲವನ್ನು ಮುರಿದುಬಿಡುವೆನೆಂದು ವಾಗ್ದಾನ ಮಾಡಿದನು (2:31). ಈ ವಾಗ್ದಾನವು ಯುದ್ಧಭೂಮಿಯಲ್ಲಿ (4:11), ಶೀಲೋವ್ ಸೋತುಹೋದಾಗ (ಕೀರ್ತನೆ 78:60 ff.); ಮತ್ತು ಅಂತಿಮವಾಗಿ ನೋಬಿನಲ್ಲಿ (22:18). ಒಬ್ಬನು ದೈವ ಭಕ್ತನಾಗಿದ್ದರೂ ಸೈತಾನನ ಮಕ್ಕಳನ್ನು

ಬೆಳೆಯಿಸಬಹುದೆಂದು ಏಲಿಯ ದುಃಖಕರವಾದ ಕತೆಯಿಂದ ನಾವು ಕಲಿಯಬಹುದು. ಮಂಜೂಷವು ಸೆರೆಹೋದಾಗ ಏಲಿ ಮತ್ತು ಅವನ ಪುತ್ರರು ಮರಣಹೊಂದಿದ್ದರು. ಅದೇ ದುಃಖದ ದಿನ ಏಲಿಯ ಮನೆಯಲ್ಲಿ ಒಂದು ಮಗುವು ಜನಿಸಿತು. "ಮಹಿಮೆಯು ಬಿಟ್ಟು ಹೋಯಿತು" ಎಂದು ಅದಕ್ಕೆ ಹೆಸರಿಡಲಾಯಿತು (4:21). ಇದು ಏಲಿಯ ಕುಟುಂಬದ ಅಂತ್ಯಕ್ಕೆ ಸೂಕ್ತವಾದ ಹೆಸರಾಗಿದೆ. ಮಹಿಮೆಯು ಅತಿಯಾಗಿ ಮುದ್ದಿಸಲ್ಪಟ್ಟ ಮತ್ತು ಹಾಳಾಗಿ ಹೋದ ಮಕ್ಕಳ ಕೈಗೆ ಶರಣಾಯಿತು!

## ಕಲಿತ ಪಾಠಗಳು

ಮೊದಲಿಗೆ ಪಾಲಕರು ತಮ್ಮ ಮಕ್ಕಳನ್ನು ಬೆಳೆಸುವಾಗ ಏನನ್ನು ಮಾಡಬಾರದು ಎಂದು ಸೋಲು ಪ್ರಕಟಿಸುತ್ತದೆ: ದೇವರ ಆಜ್ಞೆಗಳನ್ನು ಹಗುರವಾಗಿ ತೆಗೆದುಕೊಳ್ಳ ಬಾರದು (2:27-29ಎ). ಅವರ ಜೀವನದಲ್ಲಿನ ತಪ್ಪುಗಳನ್ನು ಮನ್ನಿಸುವ ಮತ್ತು ನ್ಯಾಯವೆಂದು ಸಮರ್ಥಿಸಿಕೊಳ್ಳುವ ಮೂಲಕ ನಿಮ್ಮ ಮಕ್ಕಳನ್ನು ದೇವರಿಗಿಂತ ಹೆಚ್ಚಾಗಿ ಗೌರವಿಸಬೇಡಿರಿ. ಮಕ್ಕಳ ಪಾಪದೊಂದಿಗೆ ಒಂದಾಗಬೇಡಿರಿ (2:29ಬಿ). ಹೆತ್ತವರಾಗಿ ನಿಮ್ಮ ಕರ್ತವ್ಯವನ್ನು ಹಗುರವಾಗಿ ಸ್ವೀಕರಿಸಬೇಡಿರಿ (2:29ಸಿ). ಯಾಕೆಂದರೆ, ನೀವು ನಿಮ್ಮ ಮಕ್ಕಳೊಂದಿಗೆ ನೀವು ಏನು ಮಾಡುತ್ತೀರೋ ಅದು ಇತರರ ಮೇಲೆ ಮಹತ್ತರ ವಾದ ಪ್ರಭಾವವನ್ನು ಬೀರುತ್ತದೆ (2:30-36).

ಎರಡನೇಯದಾಗಿ, ಏಲಿಯ ಭಯಂಕರವಾದ ಸೋಲು, ಪಾಲಕರಾದ ಎಲ್ಕಾನ ಮತ್ತು ಹನ್ನಳ ತತ್ವಗಳನ್ನು ಉಪಯೋಗಿಸುವ ಅವಶ್ಯಕತೆಯನ್ನು ಒತ್ತಿ ತೋರಿಸುತ್ತದೆ: ಒಂದು ಮಗುವು ದೇವರಿಂದ ಬಹುಮಾನ ಮತ್ತು ಶ್ರೇಷ್ಠವಾದ ಜವಾಬ್ದಾರಿಯನ್ನು ಅದು ಹೊಂದಿದೆ. ಆತ್ಮಿಕ ಮೌಲ್ಯಗಳನ್ನು ಎಳೆ ಮತ್ತು ಮೃದುವಾದ ಹೃದಯಗಳ ಮೇಲೆ ಬಿತ್ತುವುದು ಬಹಳ ಅವಶ್ಯವಿದೆ ಎಂದು ತಿಳಿದುಕೊಳ್ಳಿರಿ. ನಿಮ್ಮ ಮಗು ದೇವರ ಪ್ರಭಾವ ಬೀರುವಂತೆ ಅಭಿವೃದ್ಧಿಪಡಿಸುವ ಗುರಿಯನ್ನಿಟ್ಟುಕೊಂಡು ಕಷ್ಟಪಡುವದು ಅವಶ್ಯ. "ಅವನ ಜೀವವಿರು ವರೆಗೆ" ಅವನಿಗೆ ಬೋಧನೆ ಮಾಡುವದು ಅವಶ್ಯವೆಂದು ತಿಳಿದುಕೊಳ್ಳಿರಿ. ಹೆತ್ತವರು ತಮಗೆ ತಿಳಿದಿರುವದನ್ನು ಮಾತ್ರ ಬೋಧಿಸುತ್ತಾರೆ, ತಾವು ಹೊಂದಿದ ಭಾವಗಳನ್ನು ವ್ಯಕ್ತಪಡಿಸು ತ್ತಾರೆ ಮತ್ತು ತಾವು ಎಷ್ಟರ ಮಟ್ಟಿಗೆ ದೇವರನ್ನು ಗೌರವಿಸುತ್ತಾರೋ ಅಷ್ಟರ ಮಟ್ಟಿಗೆ ದೇವರ ವಿಷಯದಲ್ಲಿ ಗೌರವವನ್ನು ಬಿತ್ತುತ್ತಾರೆ ಎಂದು ತಿಳಿದುಕೊಳ್ಳಬೇಕು.

## ಮುಕ್ತಾಯ

ಮಕ್ಕಳನ್ನು ಬೆಳೆಸುವದು "ಸೂಕ್ಷ್ಮವಾದ" ಕೆಲಸವಾಗಿದೆ. ಮಕ್ಕಳನ್ನು ದೈವ ಭಕ್ತಿಯಲ್ಲಿ ತರಬೇತುಗೊಳಿಸಬೇಕಾದರೆ ಅದಕ್ಕೆ ಪರಲೋಕದ ಜ್ಞಾನಬೇಕು.ಹೆತ್ತವರು ಖಂಡಿತ ವಾಗಿಯೂ ತಪ್ಪುಗಳನ್ನು ಮಾಡುತ್ತಾರೆ. ಆದರೆ ದೇವರಲ್ಲಿ ಭಯ ಭಕ್ತಿಯಿರುವ ಮತ್ತು ತಮ್ಮ ಮಕ್ಕಳಲ್ಲಿ ಭಕ್ತಿಯನ್ನು ಬಿತ್ತುವ ಪಿತೃಗಳು ಅಲ್ಪ ತಪ್ಪುಗಳನ್ನು ಮಾಡುತ್ತಾರೆ!

ತನ್ನ ಮಕ್ಕಳ ಮೂಲುಗುವಿಕೆಗೆ ಮತ್ತು ಬೇಡಿಕೆಗಳಿಗೆ "ಒಳಗಾಗುವದು" ಸರಳ ಮಾರ್ಗವಲ್ಲವೆಂದು ಏಲಿಯು ತಿಳಿದುಕೊಳ್ಳುವದರಲ್ಲಿ ವಿಫಲನಾದನು. ದೇವರ ಅಧಿಕಾರದ ನೋಗಕ್ಕೆ ತನ್ನ ಮಕ್ಕಳನ್ನು ಮುರಿಯದ ಕಾರಣ ಏಲಿಯು ಮುರಿದ ಹೃದಯವುಳ್ಳವನಾಗಿ ತೀರಿ ಹೋದನು (3:13).